## ನಿಮ್ಮೊಡನೆ

# ಹವಾಮಾನ ವ್ಯತ್ಯಯ: ವಿಳಂಬ ಸಲ್ಲದು

**ಪರಿಸರದಲ್ಲಿ ಹೆಚ್ಚು ಇಂಗಾಲ ತುಂಬುತ್ತಿರುವ ದೇಶಗಳ ಪೈಕಿ ಚೀನಾವನ್ನು ಹೊರತುಪಡಿಸಿದರೆ ಅಮೆರಿಕವೇ ಮುಂಚೂಣಿಯಲ್ಲಿದೆ. ಗ್ಲೋಬಲ್ ವಾರ್ಮಿಂಗ್‌ಗೆ ಗಣನೀಯ ಕೊಡುಗೆ ನೀಡಿರುವ ಅಮೆರಿಕ, ಹೊಣೆಗಾರಿಕೆಯ ವಿಷಯ ಬಂದಾಗ ಅಭಿವೃದ್ಧಿಶೀಲ ದೇಶಗಳತ್ತ ಬೆಟ್ಟು ಮಾಡುತ್ತಿದೆ.**

ಜಾಗತಿಕ ತಾಪಮಾನ ಏರಿಕೆಗೆ (ಗ್ಲೋಬಲ್ ವಾರ್ಮಿಂಗ್) ಸಂಬಂಧಿಸಿದಂತೆ ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ಸಮಿತಿ (ಐಪಿಸಿಸಿ) ಇತ್ತೀಚೆಗೆ ಬಿಡುಗಡೆ ಮಾಡಿರುವ ವರದಿ ಪರಿಸರ ಮಾಲಿನ್ಯಕ್ಕೆ ಸಂಬಂಧಿಸಿದಂತೆ ಮತ್ತೊಮ್ಮೆ ಎಚ್ಚರಿಕೆಯ ಸೂಚನೆ ನೀಡಿದೆ. ಈವರೆಗಿನ ಪ್ರಯತ್ನಗಳನ್ನು ಅಣಕಿಸುವಂತೆ ಜಾಗತಿಕ ತಾಪಮಾನ ಬದಲಾವಣೆ ಅಪಾಯಕಾರಿ ಮಟ್ಟಕ್ಕೆ ಏರಿಕೆಯಾಗುತ್ತಿದೆ ಎನ್ನುವುದು ಈ ಎಚ್ಚರಿಕೆಯ ಮುಖ್ಯಾಂಶ. ಹವಾಮಾನ ಸಂರಕ್ಷಣೆಗೆ ಸಂಬಂಧಿಸಿದಂತೆ ನಮ್ಮ ಪ್ರಯತ್ನಗಳನ್ನು ಮರಳಿ ಒರೆಗೆ ಹಚ್ಚಬೇಕಾಗಿದೆ ಎಂದೂ 'ಐಪಿಸಿಸಿ' ಹೇಳಿದೆ.

ಹವಾಮಾನ ಏರಿಕೆಗೆ ಸಂಬಂಧಿಸಿದಂತೆ 2015ರಲ್ಲಿ ಪ್ಯಾರಿಸ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಸಭೆಯಲ್ಲಿ ಹಲವು ನಿರ್ಣಯಗಳನ್ನು ಕೈಗೊಳ್ಳಲಾಗಿತ್ತು. ಅವುಗಳಲ್ಲಿ ಮುಖ್ಯವಾದುದು, ಜಾಗತಿಕ ತಾಪಮಾನವನ್ನು ಕೈಗಾರಿಕಾಪೂರ್ವ ಕಾಲದ ತಾಪಮಾನಕ್ಕಿಂತ ಸರಾಸರಿ 2 ಡಿಗ್ರಿ ಸೆಲ್ಸಿಯಸ್ ದಾಟದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು. ಆದರೆ, ಈ ಗುರಿ ಪರಿಷ್ಕರಣೆಯಾಗಬೇಕಾದ ಅಗತ್ಯವಿದ್ದು ಅದನ್ನು 1.5 ಡಿಗ್ರಿ ಸೆಲ್ಸಿಯಸ್‌ಗೆ ಇಳಿಸಬೇಕಾಗಿದೆ ಎಂದು ವರದಿ ಅಭಿಪ್ರಾಯಪಟ್ಟಿದೆ. ಈ ಅರ್ಧ ಡಿಗ್ರಿ ಸೆಲ್ಸಿಯಸ್ ತಾಪಮಾನದ ವ್ಯತ್ಯಾಸ ಕೂಡ ವಿಶ್ವದ ಜೈವಿಕಚಕ್ರವನ್ನೇ ಬುಡಮೇಲು ಮಾಡುವ ಶಕ್ತಿಹೊಂದಿದ್ದು – ಬಿಸಿಗಾಳಿಯ ಅಲೆಗಳು, ಕ್ಷಾಮ, ಪ್ರವಾಹ, ಸಮುದ್ರಮಟ್ಟದಲ್ಲಿ ಉಬ್ಬರಕ್ಕೆ ಕಾರಣವಾಗಬಹುದು. ಇದರಿಂದಾಗಿ ಅನೇಕ ಜೀವಪ್ರಭೇದಗಳು ನಶಿಸಿಹೋಗುವ ಸಾಧ್ಯತೆಯೂ ಇದೆ ಎನ್ನಲಾಗಿದೆ.

ಕೃಷಿ, ಕೈಗಾರಿಕೆ, ಸಾರಿಗೆ, ಇಂಧನ ಉತ್ಪಾದನೆ ಕ್ಷೇತ್ರಗಳು ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲಿ ಪರಿಸರಸ್ನೇಹಿ ಸುಧಾರಣೆಗಳನ್ನು ಜಾರಿಗೆ ತರುವುದು ಈ ಹೊತ್ತಿನ ಅಗತ್ಯ. ಆದರೆ, ಗುರಿಸಾಧನೆಗೆ ಸಂಬಂಧಿಸಿದಂತೆ ಮಾಡಿಕೊಂಡ 'ಪ್ಯಾರಿಸ್ ಒಪ್ಪಂದ'ದಿಂದ ಅಮೆರಿಕ ಹೊರಬಂದಿರುವುದು ಸಮಸ್ಯೆಯನ್ನು ಮತ್ತಷ್ಟು ಉಲ್ಬಣಗೊಳಿಸಿದೆ. ಹವಾಮಾನ ಸಂರಕ್ಷಣೆಗೆ ಸಂಬಂಧಿಸಿದ ಕಾರ್ಯಕ್ರಮಗಳಿಗೆ ಕೇವಲ ಇಚ್ಛಾಶಕ್ತಿಯಷ್ಟೇ ಸಾಕಾಗುವುದಿಲ್ಲ. ಉದ್ದೇಶಿತ ಯೋಜನೆಗಳು ಕಾರ್ಯರೂಪಕ್ಕೆ ಬರಲು ತಂತ್ರಜ್ಞಾನದ ಬೆಂಬಲ ಹಾಗೂ ಅಪಾರ ಪ್ರಮಾಣದ ಆರ್ಥಿಕ ಸಂಪನ್ಮೂಲ ಅಗತ್ಯ. 2020ರೊಳಗೆ ಅಭಿವೃದ್ಧಿಶೀಲ ದೇಶಗಳಲ್ಲಿ 100 ಶತಕೋಟಿ ಡಾಲರ್‌ಗಳ 'ಹಸಿರು ಹವಾಮಾನ ನಿಧಿ' ಒದಗಿಸಲು ಪ್ಯಾರಿಸ್ ಸಮ್ಮೇಳನ ನಿರ್ಣಯಿಸಿತ್ತು. ಆದರೆ, ಇದರಲ್ಲಿ ಈವರೆಗೆ ಶೇ. 10ರಷ್ಟು ನಿಧಿಯೂ ಸಂಗ್ರಹವಾಗಿಲ್ಲ. ಈ ಸಂಬಂಧ ಇತ್ತೀಚೆಗೆ ಬ್ಯಾಂಕಾಕ್‌ನಲ್ಲಿ ನಡೆದ ಸಭೆ ಕೂಡ ಯಾವುದೇ ತಾತ್ವಿಕ ನಿಲುವಿಗೆ ಬಾರದೆ ಕೊನೆಗೊಂಡಿದೆ. ಪ್ಯಾರಿಸ್ ಒಪ್ಪಂದದಿಂದ ಭಾರತ– ಚೀನಾಗಳಿಗೆ ಹೆಚ್ಚು ಲಾಭವಾಗುತ್ತಿದ್ದು, ನಮಗೆ ನಷ್ಟವೇ ಹೆಚ್ಚು ಎಂದು ಅಮೆರಿಕ ಮೊಂಡುವಾದಕ್ಕಿಳಿದಿದೆ. ಆದರೆ, ಪರಿಸರದಲ್ಲಿ ಹೆಚ್ಚು ಇಂಗಾಲ ತುಂಬುತ್ತಿರುವ ದೇಶಗಳ ಪೈಕಿ ಚೀನಾವನ್ನು ಹೊರತುಪಡಿಸಿದರೆ ಅಮೆರಿಕವೇ ಮುಂಚೂಣಿಯಲ್ಲಿದೆ. ಗ್ಲೋಬಲ್ ವಾರ್ಮಿಂಗ್‌ಗೆ ಗಣನೀಯ ಕೊಡುಗೆ ನೀಡಿರುವ ಅಮೆರಿಕ, ಹೊಣೆಗಾರಿಕೆಯ ವಿಷಯ ಬಂದಾಗ ಅಭಿವೃದ್ಧಿಶೀಲ ದೇಶಗಳತ್ತ ಬೆಟ್ಟು ಮಾಡುತ್ತಿದೆ. ಹಸಿರುಮನೆ ಅನಿಲಗಳ ನಿಯಂತ್ರಣವನ್ನು ಕೂಡ ಅದು ತನ್ನ ಜವಾಬ್ದಾರಿಯನ್ನು ಗಂಭೀರವಾಗಿ ಪರಿಗಣಿಸಿಲ್ಲ. ಉಳಿದ ಶ್ರೀಮಂತ ದೇಶಗಳು ಕೂಡ ಹವಾಮಾನ ಸಂರಕ್ಷಣೆಗೆ ಸಂಬಂಧಿಸಿದ ತಮ್ಮ ಬದ್ಧತೆಯನ್ನು ನಿರ್ವಹಿಸುವಲ್ಲಿ ನಿಧಾನಗತಿ ಧೋರಣೆ ಅನುಸರಿಸಿವೆ.

ತಾಪಮಾನ ಏರಿಕೆಯ ಬಿಸಿ ಹೆಚ್ಚು ತಟ್ಟುವುದು ಭಾರತದಂಥ ಅಭಿವೃದ್ಧಿಶೀಲ ದೇಶಗಳಿಗೆ. ಅಭಿವೃದ್ಧಿ ಹೊಂದಿದ ದೇಶಗಳು ಕೈಕೊಡವಿದ ಮಾತ್ರಕ್ಕೆ ಉಳಿದವರು ಸುಮ್ಮನಿರುವಂತಿಲ್ಲ. ಹವಾಮಾನ ಸಂರಕ್ಷಣೆಗೆ ನೀಡುವ ಆರ್ಥಿಕ ನೆರವು ಅವುಗಳ ಸಾಮಾಜಿಕ ಜವಾಬ್ದಾರಿಯೇ ಹೊರತು, ಯಾರಿಗೂ ಉಪಕಾರ ಮಾಡುತ್ತಿಲ್ಲ ಎನ್ನುವುದನ್ನು ಅಮೆರಿಕ ಹಾಗೂ ಅದರ ಮಿತ್ರರಾಷ್ಟ್ರಗಳಿಗೆ ಗಟ್ಟಿದನಿಯಲ್ಲಿ ಹೇಳುವ ಕೆಲಸವನ್ನು ಭಾರತದಂಥ ದೇಶಗಳೇ ಮಾಡಬೇಕಿದೆ. ಅಭಿವೃದ್ಧಿ ಚಟುವಟಿಕೆಗಳ ಜೊತೆ ಜೊತೆಗೇ ಪರಿಸರಸ್ನೇಹಿ ಕ್ರಮಗಳನ್ನೂ ಅನುಸರಿಸಬೇಕಾಗಿದೆ. ಮಾಂಸಾಹಾರ ಸೇವನೆಯಿಂದ ಅಥವಾ ಹೈನುಗಾರಿಕೆಯಿಂದ ಪರಿಸರ ಮಾಲಿನ್ಯ ಹೆಚ್ಚುತ್ತದೆ ಎನ್ನುವಂಥ ಸಂಶೋಧನೆಗಳನ್ನು ಬದಿಗಿಟ್ಟು, ಪರ್ಯಾಯ ಇಂಧನಮೂಲಗಳನ್ನು ಗಂಭೀರವಾಗಿ ಪರಿಗಣಿಸಬೇಕಾದ ಸಂದರ್ಭ ಇಂದಿನದು. ಈ ಹಿನ್ನೆಲೆಯಲ್ಲಿ, ಭಾರತದ ಕೆಲವು ಭಾಗಗಳಲ್ಲಿ ಈಗಾಗಲೇ ಯಶಸ್ಸು ಕಂಡಿರುವ ಸೌರಶಕ್ತಿಯ ಬಳಕೆಯನ್ನು ದೊಡ್ಡ ಪ್ರಮಾಣದಲ್ಲಿ ವಿಸ್ತರಿಸುವ ಕೆಲಸ ನಡೆಯಬೇಕಾಗಿದೆ.

ಹವಾಮಾನ ಸಂರಕ್ಷಣೆಯ ನಿಟ್ಟಿನಲ್ಲಿ ವಿಶ್ವದ ಎಲ್ಲ ದೇಶಗಳನ್ನು ಒಗ್ಗೂಡಿಸುವ ಕೆಲಸದಲ್ಲಿ ಭಾರತ ಮುಂಚೂಣಿಯಲ್ಲಿ ನಿಲ್ಲಬೇಕಿದೆ. ಇದರ ಜೊತೆಗೆ, ಆಂತರಿಕವಾಗಿ ಕೂಡ ನಮ್ಮ ಅಭಿವೃದ್ಧಿಯ ಪರಿಕಲ್ಪನೆಯ ಭಾಗವಾಗಿಯೇ ಪರಿಸರ ಪ್ರೇಮವನ್ನು ಅಳವಡಿಸಿಕೊಳ್ಳಬೇಕಾಗಿದೆ.

■ ರಘುನಾಥ ಚ.ಹ.



ಈಶ್ವರ್